(ಇಂದು ದಿನಾಂಕ 17.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ವಾಟೀ ಸವಾಲು:- ವಾದಿ ಪರ ವಕೀಲರಿಂದ:-**

ಕೆಲವು ಬಾರಿ ಪ್ರತಿವಾದಿ ಬಾಡಿಗೆಯನ್ನು ನಗದಾಗಿ ನೀಡುತ್ತಿದ್ದರು ಕೆಲವು ಬಾರಿ ಬ್ಯಾಂಕಿನ ಮೂಲಕ ಕಳುಹಿಸುತ್ತಿದ್ದರು. ಪ್ರತಿವಾದಿಯ ಮನೆಯ ಕೆಳಗಡೆ ಮೊದಲು ವಾಸವಾಗಿದ್ದರು. ಪ್ರತಿವಾದಿ ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದಾಗ ವಿಶ್ವಾಸವಾಗಿ ಇದ್ದರು, ಆ ಸಮಯದಲ್ಲಿ ಪ್ರತಿವಾದಿ ನನಗೆ ಹಣ ನೀಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಗೆ ದೂರು ನೀಡುವ 2-3 ತಿಂಗಳ ಮುಂಚೆ ಪ್ರತಿವಾದಿ ಮನೆಯಿಂದ ಹೋಗಿದ್ದರು. ನನಗೆ ಹೇಳದೇ ಪ್ರತಿವಾದಿ ಮನೆಯಿಂದ ಹೋಗಿದ್ದಾರೆ ಎಂದು ದೂರಿನಲ್ಲಿ ಬರೆಸಿಲ್ಲ. ದಿನಾಂಕ 06.09.2022 ರ ಹಿಂದೆ ನನ್ನ ಬ್ಯಾಂಕಿನಲ್ಲಿ 5178/-ರೂಪಾಯಿ ಇತ್ತು ಎಂದರೆ ಸರಿ. ಅದರ ಹಿಂದಿನ ಒಂದು ವರ್ಷದ ಬ್ಯಾಂಕಿನ ವಿವರಣೆಯನ್ನು ಕೊಡಲು ತೊಂದರೆ ಇಲ್ಲ. ದಿನಾಂಕ 06.09.2022 ರಲ್ಲಿ ನಾನು ಬ್ಯಾಂಕಿನಿಂದ ಹಣ ನಾನೇ ಪಡೆದಿದ್ದೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದನ್ನು ಪ್ರತಿವಾದಿಗೆ ನೀಡಿದ್ದೇನೆ ಎನ್ನುತ್ತಾರೆ, ಈ ರೀತಿಯಾಗಿ ನಾನು ವಾದಪತ್ರದಲ್ಲಾಗಲೀ, ನೋಟಿಸಿನಲ್ಲಾಗಲೀ ಹೇಳಿಲ್ಲ ಎಂದರೆ ಸರಿಯಲ್ಲ. ದಿನಾಂಕ 05.09.2022 ರಲ್ಲಿ ಪ್ರತಿವಾದಿ ನನಗೆ 6000 ಬಾಡಿಗೆ ಹಣ ನೀಡಿದ್ದಾರೆ ಎಂದರೆ ಸರಿ. ದಿನಾಂಕ 06.02.2023 ರಲ್ಲಿ ಪ್ರತಿವಾದಿ ನನ್ನ ಖಾತೆಗೆ 10,000 ಕಳಿಸಿದ್ದಾರೆ ಎಂದರೆ ಸರಿ. ನಾನು ಬೇರೆಯವರಿಗೆ ಹಣ ಕಳಿಸಿ ಪ್ರತಿವಾದಿಗೆ ಕಳಿಸಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 07.11.2022, 07.12.2022, 04.08.2022, 04.01.2023, 06.02.2023 ರಂದು ಪ್ರತಿವಾದಿ ನನ್ನ ಖಾತೆಗೆ ಹಣ ಕಳುಹಿಸಿ ನಂತರ ಅದನ್ನು ನನ್ನಿಂದ ಪಡೆದಿದ್ದಾನೆ. ಹಣ ಕಳಿಸಿ ಮತ್ತೇ ಹಿಂಪಡೆದಿದ್ದಾನೆ ಎಂದು ಈ ಮೊದಲು ಹೇಳಿಲ್ಲ. ಪ್ರತಿವಾದಿ ಪೊಲೀಸರಿಗೆ ನಾನು ಯಾವುದೇ ಹಣ ನೀಡಬೇಕಾಗಿಲ್ಲ ಎಂದು ಹೇಳಿಕೆ ನೀಡಿದ್ದಾರೆ ಎಂದರೆ ಸರಿ. ಪ್ರತಿವಾದಿ ಕರೋನಾ ಆದ ನಂತರ ನನಗೆ 02.50 ಲಕ್ಷ ಹಣ ನೀಡಿದ್ದರು ಎಂದರೆ ಸರಿಯಲ್ಲ. 2.50 ಲಕ್ಷವನ್ನು ಹಣವನ್ನು ಆಗಾಗ ಖಾತೆಯ ಮೂಲಕ ಹಿಂತಿರುಗಿಸಿ, ಪ್ರತಿವಾದಿಯಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸಾಲ ನೀಡಿದ್ದೇನೆ ಎಂದು ಸುಳ್ಳು ಹೇಳಿ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಹಣ ನೀಡಿದಕ್ಕೆ ನಾನು ಬ್ಯಾಂಕಿನ ಮೂಲಕ ಕಳಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸ್ ದೂರು ನೀಡುವ 4 ತಿಂಗಳ ಮೊದಲೇ ನನ್ನ ಹಾಗೂ ಅವರ ವ್ಯವಹಾರ ಮುಕ್ತಾಯವಾಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಗೆ ನಮಗೆ ಬಾಡಿಗೆ ನೀಡಬೇಕು. ಬಾಡಿಗೆ ಬಾಕಿ ಇದೆ ಎಂದು ನೋಟಿಸ್ ನಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಬಾಡಿಗೆಗೆ ಇದ್ದಾಗ ನಾನು ಮನೆಯನ್ನು ಅಕ್ರಮ ಚಟುವಟಿಕೆಗೆ ಬಾಡಿಗೆಗೆ ನೀಡಿದ್ದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಪ್ರತಿವಾದಿ ಆಕ್ಷೇಪಿಸಿದ್ದರು ಎಂದರೆ ಸರಿಯಲ್ಲ. ನನ್ನ ವಿರುದ್ಧ ಪ್ರತಿವಾದಿ ದೂರು ನೀಡಿದ್ದ ಕಾರಣ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.